# ಸಮಗ್ರ ಶಿಕ್ಷಣ ಕರ್ನಾಟಕ

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗರಸ್ತೆ, ಬೆಂಗಳೂರು-01.**

ಸಂಖ್ಯೆ:ಸಶಿಕ/ಮಾ&ದಾ/ವಿ.ಪೋ.ಅ/01/2023-24/E-5802 ದಿನಾಂಕ:25:10:2023

**-:: ಸುತ್ತೋಲೆ ::-**

ವಿಷಯ:- ವಿದ್ಯಾಂಜಲಿ 2.0 ಪೋರ್ಟಲ್ ನಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ/ಅನುದಾನಿತ ಶಾಲೆಗಳನ್ನು ನೋಂದಣಿ ಮಾಡುವ ಬಗ್ಗೆ.

ಉಲ್ಲೇಖ:- 1:ಸಶಿಕ/ಮಾ&ದಾ/ವಿ.ಪೋ.ಅ/01/2023-24 ದಿನಾಂಕ:18:08:2023.
2:ಸಶಿಕ/ಮಾ&ದಾ/ವಿ.ಪೋ.ಅ/01/2023-24/E-5802 ದಿನಾಂಕ:09:10:2023.
3.GoI Letter No.N.F.4-4/2022-KT dated: 18.10.2023

~*~*~*~*~

ಶಿಕ್ಷಣ ಸಚಿವಾಲಯ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಭಾರತ ಸರ್ಕಾರವು ಶಾಲಾ ಶಿಕ್ಷಣದಲ್ಲಿ ಸಮುದಾಯ, ಸ್ವಯಂ ಸೇವಕರು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಕೊಡುಗೆ/ಸೇವೆಗಳನ್ನು ಗುರುತಿಸಿ ಶಾಲೆಗಳಿಗೆ ಸದುಪಯೋಗವಾಗುವಂತೆ ಮಾಡಲು ವಿದ್ಯಾಂಜಲಿ 2.0 ಕಾರ್ಯಕ್ರಮದ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿದೆ. ಈ ಕಾರ್ಯಕ್ರಮವು ಶಾಲೆಗಳೊಂದಿಗೆ ಸಮುದಾಯ, ಸ್ವಯಂ ಸೇವಕರು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸ್ವಯಂ ಪ್ರೇರಿತ ಕೊಡುಗೆಗಳನ್ನು ಹಾಗೂ ಸೇವೆಗಳನ್ನು ಒಟ್ಟುಗೂಡಿಸುವ ಒಂದು ವೇದಿಕೆಯಾಗಿದೆ.

ಈ ಹಿಂದಿನ ಸುತ್ತೋಲೆಗಳನ್ವಯ ಈಗಾಗಲೇ ವಿದ್ಯಾಂಜಲಿ 2.0 ಕಾರ್ಯಕ್ರಮದ ಪೋರ್ಟಲ್ ನಲ್ಲಿ ರಾಜ್ಯದ 44880 ಶಾಲೆಗಳು ನೋಂದಾಯಿಸಿಕೊಂಡಿರುತ್ತವೆ. ಉಲ್ಲೇಖ 3 ರ ಅನ್ವಯ ಶಿಕ್ಷಣ ಸಚಿವಾಲಯ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಭಾರತ ಸರ್ಕಾರವು ರಾಜ್ಯದಲ್ಲಿನ ಎಲ್ಲಾ ಜಿಲ್ಲೆಗಳ, ಎಲ್ಲಾ ಸರ್ಕಾರಿ /ಅನುದಾನಿತ ಪ್ರಾಥಮಿಕ/ಪ್ರೌಢಶಾಲೆಗಳನ್ನು ಶೇಕಡ100 ರಷ್ಟು ವಿದ್ಯಾಂಜಲಿ 2.0 ಪೋರ್ಟಲ್ ನಲ್ಲಿ ನೋಂದಣಿ ಮಾಡುವಂತೆ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿರುತ್ತಾರೆ. ಅದರಂತೆ ರಾಜ್ಯದ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳು (ಡಿವೈಪಿಸಿ ಕಾರ್ಯಕ್ರಮ)ರವರು ತ್ವರಿತವಾಗಿ ಈ ನಿಟ್ಟಿನಲ್ಲಿ ಕ್ರಮ ವಹಿಸಿ ಶಾಲೆಗಳ ನೋಂದಾವಣಿಯನ್ನು ವಿದ್ಯಾಂಜಲಿ 2.0ರಲ್ಲಿ ಶೇಕಡ100 ರಷ್ಟು ಸಾಧಿಸುವುದು ಹಾಗೂ ಶಾಲೆಗಳ ಅವಶ್ಯಕತೆ (ಸೇವೆಗಳು /ಕೊಡುಗೆ)ಗಳನ್ನು ಪೋರ್ಟನಲ್ಲಿ ನಮೂದಿಸುವುದು ಮತ್ತು ಶಾಲೆಗೆ ಅಗತ್ಯ ಸೇವೆ ನೀಡ ಬಯಸುವ ಸ್ವಯಂ ಸೇವಕರ ನೋಂದಣಿಯನ್ನು ಪೋರ್ಟನಲ್ಲಿ **http://vidyanjali.education.gov.in** ಲಿಂಕ್ ನ್ನು ಬಳಸಿ ನೋಂದಣಿ ಮಾಡುವ ಬಗ್ಗೆ ಶಾಲಾ ಮುಖ್ಯಸ್ಥರಿಗೆ ಸೂಕ್ತ ಮಾರ್ಗದರ್ಶನ ನೀಡುವುದು. **ಶಾಲೆಗಳ ನೋಂದಾವಣಿಯನ್ನು ವಿದ್ಯಾಂಜಲಿ 2.0 ಶೇಕಡ100 ರಷ್ಟುನ್ನು ನವೆಂಬರ್ ಮಾಹೆಯ** ಒಳಗೆ ಪೂರ್ಣ ಗೊಳಿಸುವುದು. ವಿದ್ಯಾಂಜಲಿ ಪೋರ್ಟಲ್‌ನ ಬಗ್ಗೆ ಸಾರ್ವಜನಿಕರಲ್ಲಿ ವ್ಯಾಪಕ ಪ್ರಚಾರ ಮಾಡುವ ಸಲುವಾಗಿ ಪ್ರತಿ ಶಾಲೆಗಳಲ್ಲಿ ವಿದ್ಯಾಂಜಲಿ ಜಾಹಿರಾತು ಫಲಕಗಳನ್ನು ಪ್ರದರ್ಶಿಸುವುದು. (Standees Of Vidyanjali)

ಮುಂದುವರೆದು ಅನುಬಂಧ 1ರಲ್ಲಿ ಜಿಲ್ಲಾವಾರು ಸಂಪೂರ್ಣ ಮಾಹಿತಿಯನ್ನು ನೀಡಲಾಗಿದ್ದು,ನೀಡಲಾಗಿರುವ ಮಾಹಿತಿಯನ್ನು ವಿಶ್ಲೇಷಿಸಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದೆ .

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು.

**ಗೆ,**

1. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ ರವರಿಗೆ.

2. ಎಲ್ಲಾ ಜಿಲ್ಲೆಗಳ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ) ಶಾಲಾ ಶಿಕ್ಷಣ ಇಲಾಖೆ ರವರಿಗೆ.
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು (ಕಾರ್ಯಕ್ರಮ), ಸಮಗ್ರ ಶಿಕ್ಷಣ ಕರ್ನಾಟಕ ರವರಿಗೆ.
4. ಕಛೇರಿ ಪ್ರತಿ.